# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಎಂ.ಪಿ.ಕುಶಲಪ್ಪ (ಸುಜಾ) ಹಾಗೂ ಶ್ರೀ ಡಿ.ಎಸ್. ಅರುಣ್ ಇವರುಗಳ ನಿಯಮ-330 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.**

*****

**ಪ್ರಶ್ನೆ:-**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಮೊದಲ ಹಂತದ 15 ಜಿಲ್ಲಾ ಅಧಿಕಾರಿ ಹುದ್ದೆಗಳನ್ನು ಡಿ.ಪಿ.ಎ.ಆರ್ ಅನುಮತಿ ಇಲ್ಲದೇ ಕಾರ್ಯಕಾರಿ ಆದೇಶ ಹೊರಡಿಸಿದ್ದು ಇದನ್ನು 6 ತಿಂಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳಬೇಕು ಎಂದು ಷರತ್ತು ವಿಧಿಸಲಾಗಿದ್ದರೂ ಸಹ ಇದನ್ನು ಉಲ್ಲಂಘನೆ ಮಾಡಿ ಇನ್ನುಳಿದ 16 ಜಿಲ್ಲಾ ಅಧಿಕಾರಿ ಹುದ್ದೆಗಳಿಗೆ ಯಾವುದೇ ವೃಂದ ಮತ್ತು ನೇಮಕಾತಿ ನಿಯಮಗಳಿಲ್ಲದೆ ಮುಂಬಡ್ತಿ ಆದೇಶ ಸಂಖ್ಯೆ: ಎಂಡಬ್ಲ್ಯುಡಿ 445 ಎಂಡಿಎಸ್ 2021, ಬೆಂಗಳೂರು ದಿನಾಂಕ:15.12.2025 ರನ್ವಯ ನೀಡಲಾಗಿರುತ್ತದೆ.

ಇದೊಂದು ಕಾನೂನುಬಾಹಿರ ಕ್ರಮವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಪ್ರಥಮವಾಗಿ ಯಾವುದೇ ಹುದ್ದೆಯನ್ನು ಮುಂಬಡ್ತಿ ಅಥವಾ ಉನ್ನತೀಕರಿಸುವ ಸಂದರ್ಭದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗುತ್ತದೆ. ಆದರೆ ಇಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಉನ್ನತೀಕರಿಸುವ ಬಗ್ಗೆ ಷರತ್ತನ್ನು ವಿಧಿಸಿರುವುದನ್ನು ನೋಡಿದ್ದಲ್ಲಿ ಪಟ್ಟಭದ್ರ ಹಿತಾಸಕ್ತಿಗಳಿಗೋಸ್ಕರ ಆದೇಶಿಸದಂತೆ ಕಾಣುತ್ತದೆ. ಆದ ಕಾರಣ, ಸದರಿ ಉನ್ನತೀಕರಿಸಿದ ಆದೇಶವನ್ನು ರದ್ದುಪಡಿಸುವುದರೊಂದಿಗೆ ಹಿಂಪಡೆಯುವಂತೆ ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಸಚಿವರಲ್ಲಿ ಚರ್ಚಿಸ ಬಯಸುತ್ತೇನೆ.

**ಉತ್ತರ:-**

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ (ಸೇವಾ ನಿಯಮಗಳು) ಟಿಪ್ಪಣಿ ಸಂಖ್ಯೆ: ಸಿಆಸುಇ 126 ಸೇನಿಡಿ 2022, ದಿನಾಂಕ:20.10.2022ರಲ್ಲಿ ನೀಡಿರುವ ಅಭಿಪ್ರಾಯದಂತೆ ಅಲ್ಪಸಂಖ್ಯಾತರ ನಿರ್ದೇಶನಾಲಯದ ಜಿಲ್ಲಾ ಅಧಿಕಾರಿ ವೃಂದದ ಹುದ್ದೆಗಳನ್ನು ಈ ಕೆಳಕಂಡಂತೆ ಎರಡು ವೃಂದಗಳಾಗಿ ಪದನಾಮಿಕರಿಸಿ ,

| ಕ್ರ.ಸಂ. | ಹುದ್ದೆ | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|---|
| 1 | ಜಿಲ್ಲಾ ಅಧಿಕಾರಿ ಗ್ರೇಡ್-1 | 52650-97100 | 15 |
| 2 | ಜಿಲ್ಲಾ ಅಧಿಕಾರಿ ಗ್ರೇಡ್-2 | 43100-83900 | 15 |

ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯುಡಿ 322 ಎಂಡಿಎಸ್ 2022, ದಿನಾಂಕ:13.01.2023ರಲ್ಲಿ ಜಿಲ್ಲಾ ಅಧಿಕಾರಿ ಗ್ರೇಡ್-1 ಹುದ್ದೆಗೆ ನೇಮಕಾತಿ ವಿಧಾನ ನಿಗದಿಪಡಿಸಿ 6 ತಿಂಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳಬೇಕೆಂದು ಷರತ್ತು ವಿಧಿಸಿ, ಕಾರ್ಯಕಾರಿ ಆದೇಶ ಹೊರಡಿಸಲಾಗಿರುತ್ತದೆ.

ಅದರಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಂಡಬ್ಲ್ಯುಡಿ 322 ಎಂಡಿಎಸ್ 2022, ದಿನಾಂಕ:23.02.2023ರಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಗ್ರೂಪ್ ಬಿ ವೃಂದದ 14 ಅರ್ಹ ಜಿಲ್ಲಾ ಅಧಿಕಾರಿಗಳಿಗೆ ಗ್ರೂಪ್ 'ಎ' ವೃಂದದ ಜಿಲ್ಲಾ ಅಧಿಕಾರಿಗಳು ಗ್ರೇಡ್-1 ಹುದ್ದೆಗೆ ಮುಂಬಡ್ತಿ ನೀಡಿ ಆದೇಶಿಸಲಾಗಿದೆ.

......2

ಮುಂದುವರೆದು, ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ /554/ವೆಚ್ಚ-3/2021, ದಿನಾಂಕ:26.09.2024 ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಸೇವಾನಿಯಮಗಳು-2) ಇಲಾಖೆಯ ಟಿಪ್ಪಣಿ ಸಂಖ್ಯೆ: ಸಿಆಸುಇ 6 ಸೇನಿಡಿ(ಇ) 2025, ದಿನಾಂಕ:01.02.2025 ರಲ್ಲಿ ನೀಡಿರುವ ಅಭಿಪ್ರಾಯದನ್ವಯ, ಬಾಕಿ ಉಳಿದ 16 ಜಿಲ್ಲಾ ಅಧಿಕಾರಿಗಳ ಗ್ರೇಡ್-2 (ಗ್ರೂಪ್ ಬಿ) ವೃಂದದ ಹುದ್ದೆಗಳನ್ನು ಜಿಲ್ಲಾ ಅಧಿಕಾರಿ/ ಸಹಾಯಕ ನಿರ್ದೇಶಕರು ಗ್ರೇಡ್-1 (ಗ್ರೂಪ್-ಎ) ವೃಂದಕ್ಕೆ ಉನ್ನತೀಕರಿಸಿ ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 445 ಎಂಡಿಎಸ್ 2021, ದಿನಾಂಕ:15.02.2025ರಲ್ಲಿ ಆದೇಶಿಸಲಾಗಿರುತ್ತದೆ.

ಅದರಂತೆ, ಸರ್ಕಾರದ ಅಧಿಸೂಚನೆ ಸಂಖ್ಯೆ: ಎಂಡಬ್ಲ್ಯೂಡಿ 445 ಎಂಡಿಎಸ್ 2021, ದಿನಾಂಕ:03.05.2025ರಲ್ಲಿ ಜಿಲ್ಲಾ ಅಧಿಕಾರಿಗಳು ಗ್ರೇಡ್-2 (ಗ್ರೂಪ್ ಬಿ) ವೃಂದದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅರ್ಹ ಅಧಿಕಾರಿಗಳಿಗೆ ಮುಂಬಡ್ತಿ ನೀಡಿ ಆದೇಶಿಸಲಾಗಿರುತ್ತದೆ.

ಜಿಲ್ಲಾ ಅಧಿಕಾರಿ ಹುದ್ದೆಗಳು ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯದ ಇನ್ನಿತರ ಹುದ್ದೆಗಳನ್ನು ಒಳಗೊಂಡಂತೆ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆಯ ಪ್ರಸ್ತಾವನೆಗೆ ಆರ್ಥಿಕ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಮತ್ತು ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಇಲಾಖೆಯ ಅನುಮೋದನೆಯನ್ನು ಈಗಾಗಲೇ ಪಡೆಯಲಾಗಿದ್ದು, ಪ್ರಸ್ತುತ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿನ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಶೀಲನಾ ಸಮಿತಿ ಸಭೆಯಲ್ಲಿ ಅಂತಿಮ ಪರಿಶೀಲನಾ ಹಂತದಲ್ಲಿದೆ.

ಕಡತ ಸಂಖ್ಯೆ: MWD-LMQ/260/2025

B. [signature]

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು